## 2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.

**ದಿಃ 15.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿ ಪರ ವಕೀಲರಿಂದಃ**

ನಾನು ಬಿ.ಕಾಂ., ಪದವಿಧರನಾಗಿದ್ದೇನೆ. ಪ್ಲಾಟ್ ನಂ.1 ಮತ್ತು 2 ಸರ್ವೆ ನಂ.104 ಎ/119 ಕೃಷ್ಣಾಪುರ ಗ್ರಾಮದ ಆಸ್ತಿ ವಿಷಯವಾಗಿ ನಾನು ಈ ದಾವೆ ಸಲ್ಲಿಸಿರುತ್ತೇನೆ. ಪ್ಲಾಟ್ ನಂ.1 ರ ವಿಸ್ತೀರ್ಣ 1 ಗುಂಟೆ 1 ಆಣೆ ಎಂದು ದಾಖಲೆಯಲ್ಲಿ ತೋರಿಸಿರುತ್ತಾರೆ. ಪ್ಲಾಟ್ ನಂ.2 ರ ವಿಸ್ತೀರ್ಣ 0.11 ಆಣೆ ಎಂದು ದಾಖಲೆಯಲ್ಲಿ ತೋರಿಸಿರುತ್ತಾರೆ. ಸದರಿ ಆಸ್ತಿಗಳು ಮದನಿ ಕಾಲೋನಿ, ಕೃಷ್ಣಾಪುರ ಗ್ರಾಮದಲ್ಲಿರುತ್ತವೆ. 1976 ರಲ್ಲಿ ಪ್ರತಿವಾದಿ ನಂ.1 ಮತ್ತು 2 ಪ್ಲಾಟ್ ಗಳನ್ನು ಮಾಡಿರುತ್ತಾರೆ. ಸದರಿ ಲೇಔಟ್ ನಲ್ಲಿ ಅಜಮಾಸು 100 ಪ್ಲಾಟ್‌ಗಳು ಇರಬಹುದು. ಪ್ರತಿವಾದಿ ನಂ.1 ಇವರ ಸೊಸೈಟಿಯಲ್ಲಿ 100 ಚಿಲ್ಲರೆ ಸದಸ್ಯರಿದ್ದಾರೆ ಎಷ್ಟು ಎಂದು ನನಗೆ ನಿಖರವಾಗಿ ಗೊತ್ತಿಲ್ಲ. 2014 ರಲ್ಲಿ ಮದನಿ ಸೊಸೈಟಿರವರು ರೆಸಿಡೆನ್ಸಿಯಲ್ ಪ್ಲಾಟ್ ಮಾಡಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಆ ಮುಂಚೆ ಮಾಡಿರುತ್ತಾರೆಂದು ನುಡಿಯುತ್ತಾರೆ. ಸದರಿ ಸೊಸೈಟಿಯಲ್ಲಿ ನಾನು 1988 ರಲ್ಲಿ ಸದಸ್ಯನಾಗಿರುತ್ತೇನೆ. ಪ್ರತಿ ಸದಸ್ಯರಿಂದ 500 ರೂ.ಗಳಂತೆ ಸೊಸೈಟಿಯವರು ಮೆಂಬರ್ ಶಿಪ್ ಫೀಸ್ ತೆಗೆದುಕೊಳ್ಳುತ್ತಾರೆ. ಸದರಿ ಲೇಔಟ್‌ನಲ್ಲಿ 30 X 40, 40 X 60 ಹಾಗೂ ಕೆಲವು odd ವಿಸ್ತೀರ್ಣದ ಪ್ಲಾಟ್‌ಗಳು ಇರುತ್ತವೆ. ಮದನಿ ಸೊಸೈಟಿಯವರು ಪ್ಲಾಟ್ ಮಾರಾಟ ಮಾಡುತ್ತಿದ್ದೇವೆಂದು ನಮಗೆ ಕರೆ ಕೊಟ್ಟರು ಎಂದರೆ ಸರಿಯಲ್ಲ. ಸದಸ್ಯರುಗಳು ಪ್ಲಾಟ್ ಗಳನ್ನು ಅರ್ಜಿ ಸಲ್ಲಿಸಿ ಹಣ ತುಂಬಿ ಖರೀದಿಸಬಹುದು ಎಂದು ಸೊಸೈಟಿಯವರು ತಿಳಿಸಿದ್ದರು ಎಂದರೆ ಸಾಕ್ಷಿ ನನಗೆ ತಿಳಿಸಿಲ್ಲ ಎಂದು ನುಡಿಯುತ್ತಾರೆ. ಸದಸ್ಯರು ಪ್ಲಾಟ್ ಖರೀದಿಸಿದ ಹಣವನ್ನು ತುಂಬಿದ ಪ್ರಕಾರ ಅವರು ಸಿನಿಯಾರಿಟಿ ಲಿಸ್ಟ ತಯಾರಿಸಿದರು ಎಂದರೆ ಸಾಕ್ಷಿ ಆ ಬಗ್ಗೆ ನನಗೆ ನೋಟೀಸ್ ನೀಡಿಲ್ಲ ಎಂದು ನುಡಿಯುತ್ತಾರೆ. ಆ ಪ್ರಕಾರ ಹಣ ತುಂಬಿದವರಿಗೆ ಮದನಿ ಸೊಸೈಟಿಯವರು ಖರೀದಿ ಪತ್ರ ಮಾಡಿಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನನಗೆ ಎಲ್ಲಾ ವಿಷಯ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಟ್ಟಿಯಲ್ಲಿ ಇದ್ದ ಸದಸ್ಯರಲ್ಲಿ ಯಾರು ಹಣ ತುಂಬುತ್ತಾರೆ ಅವರಿಗೆ ಪ್ಲಾಟ್‌ನ್ನು ನೀಡಲಾಗುತ್ತದೆ ಹಾಗೂ ಸದಸ್ಯರು ಹಣ ತುಂಬಲಿಲ್ಲವಾದರೆ ಪಟ್ಟಿಯಲ್ಲಿರುವ ಬೇರೆ

ಸದಸ್ಯರಿಗೆ ಪ್ಲಾಟ್ ಹಂಚಿಕೆಯಾಗುತ್ತದೆ ಎಂದರೆ ಸರಿ. ಸದರಿ ಪಟ್ಟಿಯಲ್ಲಿ ಒಬ್ಬ ಹಿರಿಯ ಸದಸ್ಯ ಇದ್ದರೂ ಸಹ ಅವರು ಹಣ ತುಂಬಲಿಲ್ಲವಾದರೆ ಅವರಿಗೆ ಪ್ಲಾಟ್ ಹಂಚಿಕೆ ಮಾಡಲು ಬರುವುದಿಲ್ಲ ಎಂರೆ ಸರಿ. ಸಾಕ್ಷಿ ಮುಂದುವರೆದು ನಾನು ಹಣ ತುಂಬಿದ್ದೇನು ಎಂದು ನುಡಿಯುತ್ತಾರೆ. ನಾನು ಸದರಿ ಮದನಿ ಸೊಸೈಟಿಯ ನಾಮಿನಲ್ ಸದಸ್ಯ ಎಂದರೆ ಸರಿ. ನಾನು ಇವತ್ತಿಗೂ ಪ್ಲಾಟ್ ಬೇಕು ಎಂದು ಸೊಸೈಟಿಯರಿಗೆ ಯಾವುದೇ ಅರ್ಜಿ ಸಲ್ಲಿಸಿಲ್ಲ ಎಂದರೆ ಸಾಕ್ಷಿ ಸಾಕಷ್ಟು ಅರ್ಜಿ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಅರ್ಜಿ ಸಲ್ಲಿಸಿ ಪ್ಲಾಟ್ ಖರೀದಿಗೆ ತಗಲುವ ಹಣ ತುಂಬಲಿಲ್ಲ ಎಂದರೆ ಸಾಕ್ಷಿ ತುಂಬಿಲ್ಲ ಅವರು ನನಗೆ ತುಂಬಲು ಇಂಟಿಮೇಶನ್ ನೀಡಲಿಲ್ಲ ಎಂದು ನುಡಿಯುತ್ತಾರೆ. ಹಣ ತುಂಬದ ಎಲ್ಲ ಸದಸ್ಯರು ಸೊಸೈಟಿಯವರು ಪ್ಲಾಟ್ ಹಂಚಿಕೆ ಮಾಡಿರುತ್ತಾರೆ ಎಂದರೆ ಸಾಕ್ಷಿ ತಮಗೆ ಬೇಕಾದ ಸದಸ್ಯರಿಗೆ ಹಂಚಿಕೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಅದೇ ರೀತಿ ಹಣ ತುಂಬಿದ ಸದಸ್ಯರಿಗೆ ನೊಂದಾಯಿತ ಖರೀದಿ ಪತ್ರ ಸಹ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.1 ಮತ್ತು 2 ಸೊಸೈಟಿಯವರು 2014 ರಲ್ಲಿ ಪ್ರತಿವಾದಿ ನಂ.4 ಇವರಿಗೆ ಪ್ಲಾಟ್ ನಂ.1 ಮತ್ತು 2 ಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ಬೊಗಸ್ ಖರೀದಿ ಪತ್ರ ಆಗಿರುತ್ತದೆ ಎಂದು ನುಡಿಯುತ್ತಾರೆ.

2. ಪ್ಲಾಟ್ ನಂ.1 ಮತ್ತು 2 ಒಂದಕ್ಕೊಂದು ಹೊಂದಿಕೊಂಡು ಇವೆ ಎಂದರೆ ಸರಿ. ಪ್ಲಾಟ್ ನಂ.2 ತುಂಡು ಪ್ಲಾಟ್ ಎಂದರೆ ಸರಿ. ಸದರಿ ಪ್ಲಾಟನ್ನು ಬೇರೆ ಸದಸ್ಯರಿಗೆ ಹಂಚಿಕೆ ಮಾಡಲು ಆಗುವುದಿಲ್ಲ ಎಂಬ ಕಾರಣಕ್ಕೆ ಪ್ರತಿವಾದಿ ನಂ.4 ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಅದು ಸುಳ್ಳು ಎಂದು ನುಡಿಯುತ್ತಾರೆ. ಪ್ಲಾಟ್ ನಂ.2 ಕಾರ್ನರ್ ಪ್ಲಾಟ್ ಆಗಿರುವ ಕಾರಣ ಹಾಗೂ ಅದು ಪ್ಲಾಟ್ ನಂ.1 ಇದಕ್ಕೆ ಹೊಂದಿಕೊಂಡು ಇರುವ ಕಾರಣ ಅದನ್ನು ಪ್ರತಿವಾದಿ ನಂ.4 ಇವರಿಗೆ ಮಾರಾಟ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. 2014 ರಲ್ಲಿ ಪ್ಲಾಟ್‌ಗಳನ್ನು ಖರೀದಿಸಿದವರು ಖರೀದಿ ಮಾಡಿದ ಪ್ಲಾಟ್‌ಗಳ ಕಬ್ಜೆಯಲ್ಲಿದ್ದಾರೆ ಎಂದರೆ ಸರಿ. ಪ್ಲಾಟ್ ನಂ.1 ಮತ್ತು 2 ರ ವಿಷಯವಾಗಿ ಆದ ಖರೀದಿ ಪತ್ರಗಳನ್ನು ಪ್ರಶ್ನೀಸುವ ಹಕ್ಕು ನನಗೆ ಇಲ್ಲ ಎಂದರೆ ಸರಿಯಲ್ಲ. ಈಗ ಸದರಿ ಸೊಸೈಟಿಯಲ್ಲಿ ಒಂದು ಪ್ಲಾಟ್ ಸಹ ಖಾಲಿ ಉಳಿದಿಲ್ಲ ಎಂದರೆ ನನಗೆ ಗೊತ್ತಿಲ್ಲ.

3. 2014 ರಲ್ಲಿ ಒಂದು ಪ್ಲಾಟ್ ನಂ.1 ರ ಮೌಲ್ಯ 3 ರಿಂದ 4 ಲಕ್ಷ ಇತ್ತು. ಈಗ ಸದರಿ ಪ್ಲಾಟ್ ಗಳ ಬೆಲೆಗಳು ಅದಕ್ಕಿಂತ ದುಪ್ಪಟ್ಟು ಆಗಿವೆ ಎಂದರೆ ಸಾಕ್ಷಿ ಈಗ ಆಗಿರಬಹುದು ಎಂದು ನುಡಿಯುತ್ತಾರೆ. 2014 ರಲ್ಲಿ ಯಾರಿಗೆ ಯಾವ ಪ್ಲಾಟ್ ಗಳು ಹಂಚಿಕೆಯಾಗಿವೆ ಎಂಬ ವಿಷಯ ನನಗೆ ಗೊತ್ತು ಎಂದರೆ ಸರಿಯಲ್ಲ. 2014 ರಲ್ಲಿಯ ಪ್ಲಾಟ್

ಗಳನ್ನು ಖರೀದಿ ಮಾಡಿದ ವಿಷಯ ನನಗೆ ಗೊತ್ತಿದ್ದರೂ ಸಹ ಉದ್ದೇಶಪೂರ್ವಕವಾಗಿ 2024 ರಲ್ಲಿ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಏಕೆ ದಾವೆ ಸಲ್ಲಿಸಲಿಲ್ಲ ಎಂದರೆ ಸಾಕ್ಷಿ ನಾವು ಕೋ ಆಪರೇಟಿವ್ ಸೊಸೈಟಿಗೆ ಹೋದೆವು ನಂತರ ಕೆಎಟಿ.,ಗೆ ಹೋದೆವು ಅವರು ತಮಗೆ ಅಧಿಕಾರ ಇಲ್ಲ ಎಂದು ಹೇಳಿದ ಕಾರಣ ನಂತರ ನಾವು ಈ ದಾವೆ ಸಲ್ಲಿಸಿರುತ್ತೇವೆ. ಈ ದಾವೆ ಕಾಲಮಿತಿ ಅವಧಿಯ ಒಳಗಡೆ ಸಲ್ಲಿಸಿಲ್ಲ ಹಾಗೂ ದಾವೆ ಸಲ್ಲಿಸುವಲ್ಲಿ ವಿಳಂಬವಾಗಿದೆ ಎಂದರೆ ಸರಿಯಲ್ಲ. ಈ ದಾವೆಯನ್ನು ನಾವು ಕಾಲಮಿತಿ ಅವಧಿಯ ಒಳಗಡೆ ಸಲ್ಲಿಸದೇ ಇರುವ ಕಾರಣ ನನಗೆ ಈ ದಾವೆಯಲ್ಲಿ ಕೇಳುವ ಪರಿಹಾರ ಪಡೆಯಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಖರೀದಿ ಪತ್ರ ರದ್ದುಪಡಿಸಿ ಎಂದು ಕೇಳಿಕೊಂಡ ಪರಿಹಾರಕ್ಕೆ ಯಾವುದೇ ಸಕಾರಣಗಳು ಇಲ್ಲ ಎಂದರೆ ಸರಿಯಲ್ಲ. ನಾನು ದಾವೆಯಲ್ಲಿ ಕೇಳಿಕೊಂಡಿರುವ ಹಾಗೆ ದಿಃ 21/07/2023 ರಂದು ಈ ದಾವೆ ಸಲ್ಲಿಸಲು ವ್ಯಾಜ್ಯ ಕಾರಣ ಉಂಟಾಗಿಲ್ಲ ಎಂದರೆ ಸರಿಯಲ್ಲ. ವಾದಪತ್ರದ ಖಂಡಿಕೆ ನಂ.6 ಮತ್ತು 7 ರಲ್ಲಿರುವ ವಿಷಯ ಸುಳ್ಳಾಗಿವೆ ಎಂದರೆ ಸರಿಯಲ್ಲ.

4. ಪ್ರತಿವಾದಿ ನಂ.1 ಮತ್ತು 2 ಸೊಸೈಟಿಯ ಬೈಲಾ ಉಲ್ಲಂಘನೆ ಮಾಡಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.ವಾದಪತ್ರದ ಖಂಡಿಕೆ ನಂ.8 ರಲ್ಲಿರುವ ವಿಷಯ ಸುಳ್ಳಾಗಿವೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.1 ಮತ್ತು 2 ಸೊಸೈಟಿಯ ಬೈಲಾ ಉಲ್ಲಂಘನೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಸದಸ್ಯನಾಗಿ ಸೊಸೈಟಿಯ ಜೊತೆ ಸರಿ ವರ್ತನೆ ಮಾಡಲಿಲ್ಲ ಹಾಗೂ ಸೊಸೈಟಿಯ ಮೇಲೆ ಸುಳ್ಳು ಆರೋಪ ಮಾಡಿ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ARCS ರವರ ಹತ್ತಿರ ಪ್ರತಿವಾದಿ ನಂ.1 ಮತ್ತು 2 ಇವರ ವಿರುದ್ಧ ಒಟ್ಟು 13 ಅರ್ಜಿಗಳನ್ನು ಸಲ್ಲಿಸಿದ್ದೇನು. ನಾನು, ಫಯೀಜ್ ಅಹ್ಮದ ಮಕಾನದಾರ ಮತ್ತು ರಫೀಕ ಅಹ್ಮದ ಸೇರಿ ಪ್ರತಿಯೊಬ್ಬರು ತಲಾ 13 ಅರ್ಜಿಗಳನ್ನು ARCS ರವರ ಹತ್ತಿರ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಅಲ್ಲಿ ಸಹ ಖರೀದಿ ಪತ್ರಗಳನ್ನು ರದ್ದು ಮಾಡಬೇಕೆಂದು ಕೇಳಿಕೊಂಡಿದ್ದಿರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ARCS ರವರು ತಮಗೆ ಖರೀದಿ ಪತ್ರವನ್ನು ನಿಶ್ಚಯ ಮಾಡುವ ಅಧಿಕಾರ ಇರುವುದಿಲ್ಲ ಎಂಬ ಕಾರಣಕ್ಕೆ ಸದರಿ ಅರ್ಜಿಗಳನ್ನು ವಜಾಗೊಳಿಸಿರುತ್ತಾರೆ ಎಂದರೆ ಸರಿ. ಆ ಪೈಕಿ 6-7 ಪ್ರಕಟಗಳಲ್ಲಿ ನಾನು ಕೆಎಟಿ.,ಗೆ ಮೇಲ್ಮನವಿ ಸಲ್ಲಿಸಿರುತ್ತೇನೆ. ಸದರಿ ಪ್ರಕರಣದಲ್ಲಿ ಸೊಸೈಟಿಯವರು ತಕರಾರು ಸಲ್ಲಿಸಿರುತ್ತಾರೆ ಎಂದರೆ ಸರಿ. ನಂತರ ಸದರಿ ಪ್ರಕರಣಗಳನ್ನು ನಮ್ಮ ಅರ್ಜಿಯ ಮೇರೆಗೆ ಬೆಳಗಾವಿಗೆ ಕಳುಹಿಸಲಾತ್ತವೆ ಎಂದರೆ ಸರಿ. ಸದರಿ ಎಲ್ಲ ಅರ್ಜಿಗಳು ವಜಾಗೊಂಡಿರುತ್ತವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಸರಿಯಾದ

ನ್ಯಾಯಾಲಯಕ್ಕೆ ಹೋಗಿ ಎಂದು ನಮಗೆ ಡೈರೆಕ್ಷನ್ ನೀಡಿದರು ಎಂದು ನುಡಿಯುತ್ತಾರೆ. ನನಗೆ ಎಲ್ಲ ವಿಷಯ ಗೊತ್ತಿದ್ದರೂ ಸಹ ಹಾಗೂ ನಾನು ವಿದ್ಯಾವಂತನಾಗಿದ್ದರೂ ಸಹ ಪ್ರತಿವಾದಿ ನಂ.1 ಮತ್ತು 2 ಇವರಿಗೆ ಈ ದಾವೆ ಸಲ್ಲಿಸಿ ನಷ್ಟ ಉಂಟುಮಾಡಿರುತ್ತೇನೆ ಎಂದರೆ ಸರಿಯಲ್ಲ.

5. ಶ್ರೀಮತಿ.ಶಹೀದಾ ಬೇಗಂ ನನ್ನ ಹೆಂಡತಿಯಾಗಬೇಕು. ಅವರ ಹೆಸರಿನಲ್ಲಿ ಅಂಗಡಿ, ಮನೆ ಮತ್ತು ಹೆಗ್ಗೇರಿ ವಾರ್ಡ ನಂ.39 ಸೈಟ್ ನಂ.4 ಆಸ್ತಿ ಇದೆ ಎಂದರೆ ಸಾಕ್ಷಿ ಅವರು ಸರ್ಕಾರಿ ನೌಕರರು ಹಾಗೂ ಸದರಿ ಆಸ್ತಿಗಳನ್ನು ಅವರು ಖರೀದಿಸಿರುತ್ತಾರೆ ಹಾಗೂ ಅವು ಅವರ ಸ್ವಂತ ಆಸ್ತಿಗಳು ಎಂದು ನುಡಿಯುತ್ತಾರೆ. ಸಾಕ್ಷಿಗೆ ಈ ಹಂತದಲ್ಲಿ ಪಾಪರ್ಟಿ ನಂ.4 ರ ಆಸ್ತಿ ತೆರಿಗೆ ಫಾರ್ಮನ್ನು ತೋರಿಸಿ ಸದರಿ ಆಸ್ತಿ ನಿಮ್ಮ ಹೆಂಡತಿಯ ಹೆಸರಿನಲ್ಲಿದೆ ಎಂದು ಕೇಳಲಾಗಿ ಸಾಕ್ಷಿ ಹೌದು ಎಂದು ಒಪ್ಪಿದ್ದು ಅದನ್ನು ನಿಡಿ.1 ಎಂದು ಗುರುತಿಸಲಾಯಿತು. ನನ್ನ ಹೆಸರಿನಲ್ಲಿ ಸಹ ಪ್ಲಾಟ್‌ಗಳು ಇವೆ ಎಂದರೆ ಸುಳ್ಳು. ನನ್ನ ಹಾಗೂ ನನ್ನ ಕುಟುಂಬದ ಸದಸ್ಯರ ಹೆಸರಿನಲ್ಲಿ ಪ್ಲಾಟ್‌ಗಳು ಇರುವ ಕಾರಣ ನನಗೆ ಪ್ರತಿವಾದಿ ನಂ.1 ಮತ್ತು 2 ಇವರ ಸೊಸೈಟಿಯಲ್ಲಿ ಪ್ಲಾಟ್‌ಗಳನ್ನು ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.

**(ಪಾಟೀ ಸವಾಲುಃ 3 ಮತ್ತು 4 ನೇ ಪ್ರತಿವಾದಿ ಪರ ವಕೀಲರು ಕೂಗಿ ಕರೆಸಲಾಗಿ ಅವರು ಗೈರು ಹಾಜರಿದ್ದು ಅವರ ಪರ ಪಾಟೀ ಸವಾಲಿಗೆ ಮುಂದೂಡಲಾಯಿತು)**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**